ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2343384

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Sit:www.cescmysore.org**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

**ವಿಷಯ:** ಹಿರಿಯ ಸಹಾಯಕ ಹುದ್ದೆಗಳ ಸ್ಥಳಾಂತರದ ಬಗ್ಗೆ.

**ಉಲ್ಲೇಖ:** 1. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಆಂತರಿಕ ಪರಿಶೋಧನೆ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಟಿಪ್ಪಣಿ ದಿನಾಂಕ:25.08.2020
2. ಮುಖ್ಯ ಆರ್ಥಿಕ ಅಧಿಕಾರಿ ರವರ ಟಿಪ್ಪಣಿ ದಿನಾಂಕ:01.09.2020 ಹಾಗೂ ದಿನಾಂಕ:17.11.2020
3. ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರ ಅನುಮೋದಿತ ಟಿಪ್ಪಣಿ ದಿನಾಂಕ:

---***---

**ಪೀಠಿಕೆ:**

ಚಾವಿಸನಿನಿ ವ್ಯಾಪ್ತಿಯಲ್ಲಿ ಪ್ರಸ್ತುತ ಹೆಚ್.ಆರ್.ಎಂ.ಎಸ್/ಎಫ್.ಎ.ಎಂ.ಎಸ್/ಎಂ.ಎಂ.ಎಸ್ ತಂತ್ರಾಂಶಗಳು ಚಾಲನೆಗೊಂಡಿದ್ದು ಹಾಗೂ ವಲಯ/ವೃತ್ತ/ವಿಭಾಗ/ಉಪವಿಭಾಗ ಮತ್ತು ಶಾಖಾ ಕಛೇರಿಗಳ ಲೆಕ್ಕ ನಿರ್ವಹಣೆಯು ಸಂಪೂರ್ಣ ಗಣಕೀಕೃತಗೊಂಡಿರುತ್ತದೆ. ಕೆಲವು ತಂತ್ರಾಂಶಗಳು ಪೂರ್ಣ ಮಟ್ಟದಲ್ಲಿ ಪ್ರಗತಿಗೊಂಡಿರದ ಕಾರಣ ಮ್ಯಾನುಯಲ್‌ನಲ್ಲೂ ಕರ್ತವ್ಯ ನಿರ್ವಹಣೆ ಮಾಡಲಾಗುತ್ತಿರುತ್ತದೆ. ಆದ್ದರಿಂದ ಆಂತರಿಕ ಪರಿಶೋಧನೆ ಕೈಪಿಡಿಯನ್ವಯ ಎಲ್ಲಾ ಲೆಕ್ಕ ಘಟಕಗಳ ಲೆಕ್ಕಪರಿಶೋಧನೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕಿದ್ದು, ಇದಕ್ಕೆ ಅವಶ್ಯವಿರುವ ಹಿರಿಯ ಸಹಾಯಕ ಹುದ್ದೆಗಳು ಲಭ್ಯವಿಲ್ಲದ ಕಾರಣ ಲೆಕ್ಕ ಪರಿಶೋಧನಾ ಕಾರ್ಯವು ನಿಗಧಿತ ವೇಳೆಯಲ್ಲಿ ಪೂರ್ಣಗೊಳಿಸಲು ಕಷ್ಟಸಾದ್ಯವಾಗಿರುತ್ತದೆ. ವಿಭಾಗಗಳ ವ್ಯಾಪ್ತಿಯ ಉಪವಿಭಾಗಗಳಲ್ಲಿ ಬಹಳ ವರ್ಷಗಳಿಂದ ನಗದು ಹಾಗೂ ಕಂದಾಯ ಪರಿಶೋಧನೆ ತುಂಬಾ ಹಿಂದುಳಿದಿದ್ದು, ಇವುಗಳನ್ನು ಆಗಿಂದಾಗ್ಗೆ ಆಂತರಿಕ ತನಿಖೆಗೊಳಪಡಿಸಿ ಯಶಸ್ವಿಯಾಗಿ ಪೂರ್ಣಗೊಳಿಸಬೇಕಿದ್ದು, ಹಾಲಿ ಇರುವ ಸಿಬ್ಬಂದಿಗಳಿಂದ ಸದರಿ ಕೆಲಸಗಳನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿರುತ್ತದೆ. ಲೆಕ್ಕ ಪರಿಶೋಧನಾ ಕಾರ್ಯಗಳನ್ನು ಶೀಘ್ರವಾಗಿ ನಿಗಧಿತ ವೇಳೆಯೊಳಗೆ ಪೂರ್ಣಗೊಳಿಸುವ ಉದ್ದೇಶದಿಂದ ಹಾಲಿ 2ಕ್ಕಿಂತ ಹೆಚ್ಚು ಹಿರಿಯ ಸಹಾಯಕ ಹುದ್ದೆಗಳು ಮಂಜೂರಾಗಿರುವ/ಕರ್ತವ್ಯ ನಿರ್ವಹಿಸುತ್ತಿರುವ ವಿಭಾಗೀಯ ಕಛೇರಿಗಳಿಂದ ಅದೇ ವಿಭಾಗದ ಆಂತರಿಕ ಪರಿಶೋಧನಾ ಶಾಖೆಗೆ ಹೆಚ್ಚುವರಿ ಹಿರಿಯ ಸಹಾಯಕ ಹುದ್ದೆಗಳನ್ನು ಸ್ಥಳಾಂತರಿಸಲು ಉಲ್ಲೇಖ (1) ಮತ್ತು (2)ರ ಪ್ರಸ್ತಾವನೆಗೆ ಉಲ್ಲೇಖ (3)ರಲ್ಲಿ ಅನುಮೋದಿಸಿರುವಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಸಂಖ್ಯೆ:ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ-01/2020-21/ CYS-1499 ದಿನಾಂಕ: 01 FEB 2021

ಎರಡಕ್ಕಿಂತ ಹೆಚ್ಚಿನ ಸಂಖ್ಯೆಯ ಹಿರಿಯ ಸಹಾಯಕ ಹುದ್ದೆಗಳು ಮಂಜೂರಾಗಿರುವ/ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಯ ಮತ್ತು ಪಾಲನ ವಿಭಾಗ ಕಛೇರಿಗಳಿಂದ ಒಂದು ಸಂಖ್ಯೆಯ ಹಿರಿಯ ಸಹಾಯಕ ಹುದ್ದೆಯನ್ನು ಅದೇ ವಿಭಾಗದ ಆಂತರಿಕ ಪರಿಶೋಧನೆ ಶಾಖೆಗೆ ನಿಗಮದ ಆಡಳಿತ ಹಿತದೃಷ್ಟಿಯಿಂದ ದಿನಾಂಕ 01.02.2021ರಿಂದ ಜಾರಿಗೆ ಬರುವಂತೆ ಸ್ಥಳಾಂತರಿಸಲು ಆದೇಶಿಸಿದೆ. ಸದರಿ ಆದೇಶವು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

**ಆದೇಶದ ಮೇರೆಗೆ**

**ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)**
**ಚಾವಿಸನಿನಿ., ಮೈಸೂರು.**

**ಪ್ರತಿಗಳು :**

- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.

**ಪು.ತಿ.ನೋ**

ಎಂ.ಐ.ಎಸ್. ವಿಭಾಗಕ್ಕೆ (ಪ್ರತಿಯನ್ನು)

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
- ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು/ಹಾಸನ/ಚಾ-ಕೊಡಗು/ ಮಂಡ್ಯ ಸದರಿ ಮೇಲಿನ ಆದೇಶದಂತೆ ಕ್ರಮವಹಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವುದು.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿ(ಆಂ.ಪ),ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.
- ಆ.ಕಾ-ವ್ಯ.ನಿ/ಮು.ಆ.ಅ.
- ವ್ಯ1(ಆ ಮತ್ತು ಮಾಸಂ)/ಸ2(ಆ ಮತ್ತು ಮಾಸಂ)/ಪ್ರ.ಕ.